# ನಾ ಕಂಡಂತೆ ನನ್ನ ತಂದೆಯವರು

೦ ಶ್ರೀಮತಿ ತಾರಿಣಿ ಚಿದಾನಂದ

ಮಲೆನಾಡಿನ ಮೂಲೆಯ ಹಳ್ಳಿಯೊಂದರಲ್ಲಿ ಹೊರ ಪ್ರಪಂಚದ ಪರಿಚಯವೆ ಇಲ್ಲದೆ ಹುಟ್ಟಿ ಬೆಳೆದ ತಂದೆಯವರು, ಎಲ್ಲ ಒತ್ತಡಗಳನ್ನು ದಾಟಿ, ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಮೈಸೂರನ್ನು ಸೇರಿದರು. ಬಹುಶಃ ಅಗೋಚರ ಅಭಯ ಕೃಪಾಹಸ್ತವೊಂದು ಅವರನ್ನು ಇಲ್ಲಿಗೆ ಎಳೆತಂದಿರಬೇಕು. ಅವರಲ್ಲಿದ್ದ ಜ್ಞಾನಾರ್ಜನೆಯ ತೀವ್ರ ಅಭಿಲಾಷೆ ಅವರನ್ನು ಮೈಸೂರಿನ ಲೈಬ್ರರಿಗೂ ಕರೆದೊಯ್ದಿತು. ಅಲ್ಲಿ ಆಕಸ್ಮಿಕವಾಗಿ ದೊರೆತ ಸ್ವಾಮಿ ವಿವೇಕಾನಂದರ 'ಕೃತಿಶ್ರೇಣಿ' ಪುಸ್ತಕ ಅವರ ಜೀವನದ ದಾರಿಯನ್ನು ನಿಚ್ಚಳಗೊಳಿಸಿತು. ಅವರೇ ಹೇಳುವಂತೆ "ಹೀಗೆ ನೋಡುತ್ತಿದ್ದಾಗಲೆ ನನಗೆ ನನ್ನ ಜೀವನದ ದಿಕ್ಕನ್ನೇ ತಿರುಗಿಸಿ ನನ್ನ ಬದುಕನ್ನೆಲ್ಲ ಮರ್ತ್ಯದಿಂದ ಅಮರ್ತ್ಯಕ್ಕೆತ್ತಿ ಬೀಸಿದ ಭಗವದ್‌ಕೃಪಾಹಸ್ತರೂಪದ ಶ್ರೀರಾಮಕೃಷ್ಣ ವಿವೇಕಾನಂದ ವಿಷಯಕವಾದ ಕೃತಿಶ್ರೇಣಿ ದರ್ಶನವಾದದ್ದು!" ಈ ರೀತಿ ದರ್ಶನವಿತ್ತ ಶ್ರೀಗುರು, ಶ್ರೀಮಾತೆ, ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣ ಆಶ್ರಮದ ತೆಕ್ಕೆಗೆ ಅವರನ್ನು ಎಳೆದುಕೊಂಡು ಮುಂದೆ ಅವರ ಜೀವನವಿಡೀ ಹಾಸುಹೊಕ್ಕಾಗಿ ಬೆರೆತುಹೋದರು. ತಂದೆಯವರು ಅವರ 'ನೆನಪಿನ ದೋಣಿ' ಪುಸ್ತಕದಲ್ಲಿ ಒಂದು ಕಡೆ "ನಾನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿದ್ದಾಗ ಫ್ರಾನ್ಸಿನಿಂದ (ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ಸಿದ್ದೇಶ್ವರಾನಂದರು) ಬರೆದ ಒಂದು ಕಾಗದದಲ್ಲಿ ಅಲ್ಲಿಯ ಒಬ್ಬ ತತ್ತ್ವಜ್ಞ ಲೇಖಕನ ವಿಚಾರವಾಗಿ ತಿಳಿಸುತ್ತಾ ಮೈಸೂರಿನಲ್ಲಿ ಶ್ರೀರಾಮಕೃಷ್ಣ ಆಶ್ರಮವು ಪುಟ್ಟಪ್ಪನನ್ನು ಕಂಡುಹಿಡಿದು ಬೆಳಕಿಗೆ ತಂದಂತೆ ಫ್ರಾನ್ಸಿನಲ್ಲಿರುವ ಶ್ರೀರಾಮಕೃಷ್ಣ ವೇದಾಂತ ಕೇಂದ್ರವು ಆ ಲೇಖಕನನ್ನು ಕಂಡುಹಿಡಿದಿದೆ!" ಎಂದು ಬರೆದಿದ್ದಾರೆ. ಇದನ್ನು ಓದಿದಾಗ ತಂದೆಯವರಿಗೂ ಶ್ರೀರಾಮಕೃಷ್ಣ ಆಶ್ರಮಕ್ಕೂ ಅವಿನಾ ಸಂಬಂಧ ಇರುವುದು ತಿಳಿಯುತ್ತದೆ. ರಾಮಕೃಷ್ಣ-ವಿವೇಕಾನಂದರ ವಿಚಾರಧಾರೆಯಿಂದ ಪ್ರಭಾವಿತರಾದ ತಂದೆಯವರು ತಮ್ಮ ಸಮೀಪವರ್ತಿಗಳಿಗೂ, ತಮ್ಮಲ್ಲಿಗೆ ಬಂದವರಿಗೂ, ಆ ವಿಚಾರಗಳನ್ನು ತುಂಬುತ್ತಿದ್ದರು. ಅದರಿಂದ ಎಲ್ಲರೂ ಆ ಪ್ರಭಾವದ ಪರಿವೇಷಕ್ಕೆ ಒಳಗಾಗುವಂತಾಗುತ್ತಿತ್ತು. ಅದಕ್ಕೆ ಮನೆಯವರೂ ಹೊರತಾಗಿರಲಿಲ್ಲ.

ನಮ್ಮ ಉದಯರವಿ ಊಟದ ಮನೆಯಲ್ಲಿ ಶ್ರೀರಾಮಕೃಷ್ಣ ಶ್ರೀಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ದೊಡ್ಡ ಪಟಗಳನ್ನು ಹಾಕಿರುವರು. ಹಾಗೆಯೇ ಮನೆಯಲ್ಲಿ ಇನ್ನೂ ಅನೇಕ ಪ್ರಕೃತಿದೃಶ್ಯ ಪಟಗಳು ಗೋಡೆಯಲ್ಲಿ ಶೋಭಿಸುತ್ತಿದ್ದವು. ಅದರಲ್ಲಿ ಕಲಾವಿದರಾದ ನಮ್ಮ ಚಿಕ್ಕಮ್ಮ ಜಯಲಕ್ಷ್ಮಿ ಅವರು ಬರೆದ ಕೆಲವು ಚಿತ್ರಗಳೂ ಇದ್ದವು. ಒಂದು ಚಿತ್ರದಲ್ಲಿ ಸಣ್ಣ ಚಂದದ ಮನೆ, ಅದರ ಸುತ್ತಲೂ ದಟ್ಟವಾದ ಮರಗಿಡಗಳು, ಪಕ್ಕದಲ್ಲಿ ಒಂದು ತೊರೆ ಹರಿಯುತ್ತಿದೆ. ಸಣ್ಣ ಸಣ್ಣ ಕಲ್ಲು ಬಂಡೆಗಳ ನಡುವಿನಿಂದ, ಮೇಲಿಂದ ಕೆಳಗೆ ಹರಿಯುತ್ತಿರುವ ನೀರಿನ ದೃಶ್ಯ ತುಂಬ ಮನೋಹರವಾಗಿತ್ತು. ಚಿಕ್ಕವರಾದ ನಮಗೆ "ಅದೇನು ಚಿತ್ರ, ಇದೇನು ಚಿತ್ರ" ಎಂದು ಎಲ್ಲದರ ಬಗ್ಗೆಯೂ ಕೇಳುವ ಕುತೂಹಲ. ಅಂತಹ ಸಂದರ್ಭದಲ್ಲಿ ತಂದೆಯವರು ಆ ಚಿತ್ರ ತೋರಿಸಿ "ನೋಡು, ಆ ಪುಟ್ಟ ಮನೆಯಲ್ಲಿ ಶ್ರೀಮಾತೆ (ಶ್ರೀಶಾರದಾದೇವಿ) ಅವರು ಚಪಾತಿ ಮಾಡುತ್ತಾ ಕುಳಿತಿದ್ದಾರೆ. ನೀನು ಕಲಾ (ಅಕ್ಕ) ಹೊರಗೆ ಆಟವಾಡಿ ಹಸಿವೆಯಾಗಿ ಆ ಕಲ್ಲು ಬಂಡೆಗಳ ಮೇಲೆ ದಾಟುತ್ತಾ ಮನೆಗೆ ಹೋಗುವಿರಿ. ಶ್ರೀಮಾತೆ ಚಪಾತಿ ಮಾಡಿ, ನಿಮಗಾಗಿ ಕಾಯುತ್ತಾ ಕುಳಿತಿದ್ದಾರೆ" ಎಂದು ಹೇಳಿದ್ದು ಇಂದಿಗೂ ಮನಸ್ಸಿನಲ್ಲಿ ನಿಂತಿದೆ. ನಮ್ಮ ಆತ್ಮೀಯ ಹಿರಿಯ ಅಜ್ಜಿ ಅಲ್ಲಿದ್ದಾರೆ ಅವರೇ ನಮಗೆ ಚಪಾತಿ ತಿಂಡಿ ಎಲ್ಲ ಮಾಡಿಕೊಡುವುದು ಎಂಬ ಭಾವನೆ ಮನಸ್ಸಿಗೆ ಬರುತ್ತಿತ್ತು. ಮುಂದೆ ನಮ್ಮ ಕಲ್ಪನೆಯಿಂದ ಅದಕ್ಕೆ ನಾನಾತರ ಕತೆಕಟ್ಟಿ ಆ ಚಿತ್ರ ನೋಡಿ ಸುಖಿಸುತ್ತಿದ್ದೆವು. ಹೀಗೆ ಶ್ರೀಮಾತೆಯವರು ನನ್ನ ಮನಸ್ಸನ್ನು ತುಂಬಿಕೊಂಡರು, ನಾನು ದೊಡ್ಡವಳಾದಂತೆ ಶ್ರೀಮಾತೆಯ ಮೂಲಕ ಶ್ರೀರಾಮಕೃಷ್ಣ ವಿವೇಕಾನಂದ ಸಾಹಿತ್ಯ ಓದುತ್ತಾ ನನ್ನ ಮನಸ್ಸು ವಿಶಾಲವಾಗತೊಡಗಿತು. ತಂದೆಯವರು ಅಂದು ಬಿತ್ತಿದ ಆ ಬೀಜ ಇಂದು ಶ್ರೀಗುರು, ಶ್ರೀಮಾತೆ, ವಿವೇಕಾನಂದರು ನನ್ನ ಮನಸ್ಸಿನಲ್ಲಿ ಬೆಳೆದು ಹೆಮ್ಮರವಾಗಿರುವಂತೆ ಮಾಡಿದೆ.

ತಂದೆಯವರು ಎಂದೂ ದೇವಸ್ಥಾನಗಳಿಗೆ ಪೂಜೆ ಮಾಡಿಸಲು ಹೋಗಿರುವುದನ್ನು ನಾನು ನೋಡಿಲ್ಲ. ಅವರು ಹೋಗುತ್ತಿದ್ದುದು ಶ್ರೀರಾಮಕೃಷ್ಣ ಆಶ್ರಮಕ್ಕೆ ಮಾತ್ರ. ನಮ್ಮ

**ಅತಿ ಸಮೀಪದಿಂದ ಕುವೆಂಪು ಅವರನ್ನು ಕಂಡು ಬಿಪ್ರತ್ರಯರು ಅವರನ್ನು ಹೇಗೆ ವ್ಯಾಪಿಸಿದ್ದರು ಎಂದು ತಿಳಿಸುವ ತಾರಿಣಿಯವರು ಕುವೆಂಪು ಅವರ ಪುತ್ರಿ.**

ಪ್ರಾಯೋಜಕರು : ಹೋಟೆಲ್ ಶಾರದ ಲಾಡ್ಜಿಂಗ್, # 25 ಕೆಂಪೇಗೌಡ ಸರ್ಕಲ್, ಬೆಂಗಳೂರು –560 009



ಕುವೆಂಪು ಅವರ ಮನೆಯಲ್ಲಿರುವ ಪೂಜಾಗೃಹ ಚಿತ್ರಕೃಪೆ: ಕೃಪಾಕರ ಸೇನಾನಿ

ಮನೆಯಲ್ಲಿ ಗೌರಿಗಣೇಶ, ದೀಪಾವಳಿ ಹಬ್ಬಗಳಂತೆ ಹೆಚ್ಚಿನ ಶ್ರದ್ಧಾಭಕ್ತಿಯಿಂದ ಆಚರಿಸುತ್ತಿದ್ದ ಮುಖ್ಯ ಹಬ್ಬಗಳೆಂದರೆ ಶ್ರೀರಾಮಕೃಷ್ಣ, ವಿವೇಕಾನಂದ ಮತ್ತು ಶ್ರೀಶಾರದಾದೇವಿಯವರ ಜಯಂತಿ ಉತ್ಸವಗಳು. ತಂದೆಯವರ ಜನ್ಮದಿನ ಕ್ಯಾಲೆಂಡರ್ ಪ್ರಕಾರ ಡಿಸೆಂಬರ್ ಇಪ್ಪತ್ತಒಂಬತ್ತು, ಪಂಚಾಗದ ಪ್ರಕಾರ ಮಾರ್ಗಶಿರ ಬಹುಳ ಸಪ್ತಮಿ. ಶ್ರೀಶಾರದಾದೇವಿ ಜನ್ಮದಿನವೂ ಮಾರ್ಗಶಿರ ಬಹುಳ ಸಪ್ತಮಿ. ಆದ್ದರಿಂದ ಶ್ರೀಮಾತೆಯವರ ಜಯಂತಿ ಆಚರಿಸುವಾಗಲೇ ತಂದೆಯವರ ಜನ್ಮದಿನ ಆಚರಿಸುತ್ತಿದ್ದೆವು. ಆ ದಿನ ದೇವರ ಮನೆಯಲ್ಲಿ ವಿಶೇಷ ಪೂಜೆ. ನಾನು ಅಕ್ಕ, ಬೆಳಿಗ್ಗೆ ಮುಂಚೆಯೆ ಎದ್ದು ದೇವರಿಗೆ ವಿಶೇಷ ರೀತಿಯ ಹೂವಿನ ಅಲಂಕಾರ ಮಾಡಿ, ಮನೆಯ ಮುಂದೆ ಬಣ್ಣದ ರಂಗೋಲಿ ಹಾಕಿ ಮನೆಯನ್ನು ತಳಿರು ತೋರಣಗಳಿಂದ ಸಿಂಗರಿಸುತ್ತಿದ್ದೆವು. ತಂದೆಯವರು ಎಲ್ಲ ವಿಚಾರದಲ್ಲಿಯೂ ಪ್ರೋತ್ಸಾಹಿಸಿ, ಪ್ರಶಂಸಿಸುತ್ತಿದ್ದರು. ತಂದೆಯವರದ್ದು ಸರಳವಾದ ಪೂಜೆ. ಶಾಂತಿಪಾಠ, ಶ್ಲೋಕಗಳನ್ನೆಲ್ಲ ಹೇಳಿ ದೇವರಿಗೆ ಆರತಿ ಎತ್ತುತ್ತಿದ್ದರು. ಕೊನೆಗೆ ಶ್ರೀರಾಮಕೃಷ್ಣ ಸ್ತೋತ್ರ **'ಓಂ ಹ್ರೀಂ ಋತಂ'** ಹೇಳುತ್ತಿದ್ದರು. ಮುಂದೆ ಅವರೇ ಬರೆದ ಕವನ 'ಶ್ರೀಶಾರದಾದೇವಿ ಹೇ ಮಾಹಾಮಾತೆ' ಮೊದಲಾದುವನ್ನು ಹೇಳುತ್ತಿದ್ದರು. ಆ ದಿನ ಶ್ರೀಮಾತೆಗೆ ಸಂಬಂಧಪಟ್ಟ ಪುಸ್ತಕದಿಂದ ಸ್ವಲ್ಪಭಾಗ ಓದುತ್ತಿದ್ದರು. ಅಮ್ಮ ಶ್ರೀಮಾತೆಯವರ ಜಯಂತಿಯಂದು ಹೋಳಿಗೆ, ಪಾಯಸ ಇತ್ಯಾದಿ ತಯಾರು ಮಾಡಿ ನೈವೇದ್ಯಕ್ಕೆ ಇಡುತ್ತಿದ್ದರು. ತಂದೆಯವರು ನಾವು ಶಾಲೆಗೆ ಹೋಗುವ ಸಮಯಕ್ಕೆ ಮೊದಲೆ ಪೂಜೆ ಮಾಡಿ ನಾವು ಭಾಗವಹಿಸುವಂತೆ ಮತ್ತು ನೈವೇದ್ಯ ಸ್ವೀಕರಿಸಿ ಹೋಗುವಂತೆ ಮಾಡುತ್ತಿದ್ದರು. ತಂದೆಯವರು ಊಟಮಾಡುವಾಗ "ಈ ದಿನ ನನ್ನ ಹುಟ್ಟಿದ ಹಬ್ಬವೂ ಆಗಿದೆ... ಅಮ್ಮ ವಡೆ ಹೋಳಿಗೆ ತಯಾರು ಮಾಡಿದ್ದಾರೆ. ಶ್ರೀಮಾತೆ ಸಂಪ್ರೀತರಾಗಿದ್ದಾರೆ. ಬನ್ನಿ ಎಲ್ಲರೂ ನೈವೇದ್ಯ ಸ್ವೀಕರಿಸೋಣ. ಹೋಳಿಗೆ ತುಪ್ಪ, ಹೋಳಿಗೆ ತುಪ್ಪ, ಹೋಳಿಗೆ ತುಪ್ಪ; ಹೊಡೀರಪ್ಪಾ ಹೊಡೀರಪ್ಪಾ ಹೊಡೀರಪ್ಪಾ" ಎಂದು ಅಭಿನಯ ಪೂರ್ವಕ ಹೇಳುತ್ತಾ ತಮ್ಮ ಸಂತೋಷ ವ್ಯಕ್ತಪಡಿಸುತ್ತಿದ್ದರು.


ಜಯಂತಿಯ ದಿನಗಳಲ್ಲಿ ಅಮ್ಮ ಬೆಳಗ್ಗೆ ಐದು ಗಂಟೆಗೆ ಆಶ್ರಮದಲ್ಲಿ ನಡೆಯುತ್ತಿದ್ದ ಪೂಜಾಕಾರ್ಯಕ್ರಮಕ್ಕೆ ಹೋಗುತ್ತಿದ್ದರು. ಅವರನ್ನು ಬಿಟ್ಟು ಬರಲು ತಂದೆಯವರೂ ಅಮ್ಮನೋಡನೆ ನಡೆದುಹೋಗುತ್ತಿದ್ದರು. ಅಮ್ಮ ದೇವಸ್ಥಾನದೊಳಗೆ ಹೋಗಿ ಕುಳಿತುಕೊಳ್ಳುತ್ತಿದ್ದರು. ತಂದೆಯವರು ಹೊರಗಡೆ ದೇವರು ಕಾಣುವಂತೆ ಎದುರು ಬಾಗಿಲಲ್ಲಿ ನಿಂತು ನೋಡುತ್ತಿದ್ದು, ಗರ್ಭಗುಡಿ ಬಾಗಿಲು ತೆರೆದು ಪೂಜೆ ಆರಂಭವಾಗುವವರೆಗೆ ನಿಂತಿರುತ್ತಿದ್ದರು. ಭಕ್ತರು ಬರತೊಡಗಿದ ಮೇಲೆ ಅಲ್ಲಿಂದಲೇ ತಮ್ಮ ಬೆಳಗಿನ ವಾಕಿಂಗ್ ಮುಂದುವರಿಸುತ್ತಿದ್ದರು.

ಸಂಜೆ ನಾವು ಬಂದಮೇಲೆ ತಂದೆಯವರು ನಮ್ಮನ್ನೆಲ್ಲ ಕಾರಿನಲ್ಲಿ ಆಶ್ರಮಕ್ಕೆ ಕರೆದೊಯ್ಯುತ್ತಿದ್ದರು. ಕಾರ್ಯಕ್ರಮ ಆರಂಭವಾಗುವ ಮೊದಲೆ ಹೋಗಿ ಪೂಜಾಮಂದಿರದಲ್ಲಿ ದೇವರಿಗೆ ನಮಸ್ಕರಿಸಿ, ಆಶ್ರಮದ ಅಧ್ಯಕ್ಷರ ಕ್ಷೇಮ ಸಮಾಚಾರ ವಿಚಾರಿಸಿ, ಎದುರಿಗೆ ಕಾಣಿಸಿದ ಹಿರಿಯ ಕಿರಿಯ ಸ್ವಾಮಿಗಳನ್ನು ಮಾತಾಡಿಸಿ ಮನೆಗೆ ಹಿಂದಿರುಗುತ್ತಿದ್ದರು. ನಾನು ಅಕ್ಕ ಅಮ್ಮ ಆಶ್ರಮದಲ್ಲಿ ಉಳಿದು ಆರತಿ ಮುಗಿಸಿ ಮನೆಗೆ ಹೋಗಿ, ಅನಂತರ ತಂದೆಯವರ ಪೂಜೆಯಲ್ಲಿ ಭಾಗ ವಹಿಸುತ್ತಿದ್ದೆವು. ನಾವು ಆಶ್ರಮದಿಂದ ಬಂದಮೇಲೆ ತಂದೆಯವರು **"ಇಂತಹ ಪವಿತ್ರ ಉತ್ಸವಗಳಲ್ಲಿ ಆಶ್ರಮದಲ್ಲಿ ನಾವು ಭಾಗವಹಿಸುವ ಉದ್ದೇಶ: ವಿಷಯಗಳನ್ನು ಅರಿಯುವುದಕ್ಕಿಂತಲೂ ಹೆಚ್ಚಾಗಿ ಅಲ್ಲಿ ಆವಿರ್ಭವಿಸುವ ಭಾವದಲ್ಲಿ ಭಾಗಿಗಳಾಗುವುದೇ ಮುಖ್ಯ"** ಎನ್ನುತ್ತಿದ್ದರು. ಕೊನೆಯಲ್ಲಿ ನಾನು ಅಕ್ಕ ಶ್ರೀಮಾತೆಯನ್ನು ಜಯಂತಿಯಂದು ತಂದೆಯವರ 'ಶ್ರೀಶಾರದಾದೇವಿ' ಕವನ, ಶ್ರೀಮಾ-ನಾಮ ಸಂಕೀರ್ತನೆ, ದುರ್ಗಾಸಪ್ತಶತಿಯಲ್ಲಿರುವ ಶ್ಯಾಮಲಾನವರತ್ನಮಾಲಿಕಾ, ಮಹಿಷಾಸುರಮರ್ದಿನಿ ಮೊದಲಾದವುಗಳನ್ನು ಹಾಡುತ್ತಿದ್ದೆವು. ಹೀಗೆಯೇ ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದರ ಜಯಂತಿಗಳನ್ನೂ ನಮ್ಮ ಮನೆಯಲ್ಲಿ ಆಚರಿಸುತ್ತಿದ್ದೆವು. ತಂದೆಯವರು ಬಹಳ ಹೊತ್ತು ದೇವರ ಮನೆಯಲ್ಲಿರುತ್ತಿದ್ದರು.

ತಂದೆಯವರೊಡನೆ ಮಾತಾಡಲು ರಾಮಕೃಷ್ಣ ಆಶ್ರಮದ ಸ್ವಾಮಿಗಳು ಆಗಾಗ ನಮ್ಮ ಮನೆಗೆ ಬರುತ್ತಿದ್ದರು. ಅಮ್ಮ ಹೇಳುತ್ತಿದ್ದರು: "ನಾನು ಚಿಕ್ಕವಳಾಗಿದ್ದಾಗ ಅನೇಕ ಬಾರಿ ಸ್ವಾಮಿಗಳನ್ನು ತಂದೆಯವರು ಮನೆಗೆ ಊಟಕ್ಕೆ ಕರೆದು

ಕೊಂಡು ಬರುತ್ತಿದ್ದರು. ಆಗ ಮೈಸೂರು ಆಶ್ರಮದಲ್ಲಿ ನಡೆಯುತ್ತಿದ್ದ ವೇದಾಂತ ಅಧ್ಯಯನಕ್ಕಾಗಿ ಬೇಲೂರು ಮಠದಿಂದ ಅನೇಕ ಸನ್ಯಾಸಿಗಳು, ಬ್ರಹ್ಮಚಾರಿಗಳು ಬರುತ್ತಿದ್ದರು. ಅವರನ್ನೆಲ್ಲ ಊಟಕ್ಕೆ ಕರೆಯುತ್ತಿದ್ದರು. ಆ ಸಮಯದಲ್ಲಿ ಇಲ್ಲಿಯೂ ಎಲ್ಲರಿಂದ ವೇದಾಂತ ವಿಚಾರದಲ್ಲಿ ಮಾತುಕತೆ, ದೀರ್ಘಚರ್ಚೆ ನಡೆಯುತ್ತಿದ್ದವು" ಎಂದು. ತಂದೆಯವರು ಆಶ್ರಮದ ಮೊದಲ ಅಧ್ಯಕ್ಷರಾದ ಸ್ವಾಮಿ ಸಿದ್ಧೇಶ್ವರಾನಂದರ ವಿಚಾರ ಯಾವಾಗಲೂ ಹೇಳುವುದನ್ನು ಕೇಳುತ್ತಿದ್ದೆ. ನನಗೆ ಅವರನ್ನು ನೋಡಿದ ನೆನಪಿಲ್ಲ. ನಾನು ಒಂದು ವರ್ಷದವಳಾದಾಗ ಅವರು ಫ್ರಾನ್ಸ್‌ನಿಂದ ಬಂದಿದ್ದರಂತೆ. ನಮ್ಮ ಉದಯರವಿ ಮನೆಯಲ್ಲಿ ತುಂಬ ಸಮಯ ಇದ್ದು ದೇವರ ಮನೆಯಲ್ಲಿ ತುಂಬ ಹೊತ್ತು ಧ್ಯಾನನಿರತರಾಗಿದ್ದರಂತೆ. "ನಿನ್ನನ್ನು ತೊಡೆಯ ಮೇಲೆ ಕೂರಿಸಿಕೊಂಡು ಭಜನೆ ಮಾಡಿದ್ದರು" ಎಂದು ತಂದೆಯವರು ಹೇಳಿದ್ದರು. ಮತ್ತೆ ಅವರು ಫ್ರಾನ್ಸ್‌ಗೆ ಹೋದಮೇಲೆ ಭಾರತಕ್ಕೆ ಬರಲಿಲ್ಲ. ಅವರ ನಂತರ ಅಧ್ಯಕ್ಷರಾದ ಸ್ವಾಮಿ ದೇಶಿಕಾನಂದ ಅವರು ಇದ್ದಾಗಲೂ ನಾನು ಸಣ್ಣವಳಾಗಿದ್ದೆ. ನನಗೆ ಯಾವಾಗಲೂ ನೆನಪಾಗುವುದು ಶ್ರೀ ಶಾಂಭವಾನಂದ ಸ್ವಾಮೀಜಿ. ಅವರು ಆಗಾಗ್ಗೆ ಮನೆಗೆ ಬಂದು ತಂದೆಯವರೊಡನೆ ಮಾತುಕತೆಯಾಡುತ್ತಿದ್ದರು. ಬಹಳ ಶಿಸ್ತಿನಿಂದ ಕೂಡಿದ ಅವರ ನಡೆ ನುಡಿ, ನಿಲವುಗಳಿಗೆ ನಾವು ಭಯ ಭಕ್ತಿಯಿಂದ ತುಂಬ ಗೌರವ ಕೊಡುತ್ತಿದ್ದೆವು. ನಮ್ಮ ಮನೆಯಲ್ಲಿ ಅನೇಕ ರೀತಿಯ ನವೀನ ರೀತಿಯ ಅನುಕೂಲಗಳನ್ನು ಮಾಡಿಕೊಡಲು ಅದರಲ್ಲೂ ಅಡುಗೆ ಮನೆಗೆ ಸಂಬಂಧಿಸಿದ ವಿಚಾರಗಳಲ್ಲಿ ಸ್ವಾಮೀಜಿ ಅವರೆ ಪರೋಕ್ಷವಾಗಿ ಕಾರಣರು.

ಮುಂದಿನ ಅಧ್ಯಕ್ಷರಾದ ಸ್ವಾಮಿ ಸೋಮನಾಥಾನಂದರು ತುಂಬ ವರ್ಷಗಳಿಂದ ಇಲ್ಲಿಯೇ ಇದ್ದು ಕನ್ನಡದಲ್ಲಿ ಶ್ರೀರಾಮಕೃಷ್ಣ ವಿವೇಕಾನಂದ ಸಾಹಿತ್ಯ ಬರಲು ಮುಖ್ಯ ಕಾರಣರಾದರು. ಅವರಿಗೂ ತಂದೆಯವರಿಗೂ ಯಾವಾಗಲೂ ಸಾಹಿತ್ಯದ ಬಗ್ಗೆ ವಿಚಾರ ವಿನಿಮಯ ನಡೆಯುತ್ತಿತ್ತು. ತಂದೆಯವರ 'ಸ್ವಾಮಿ ವಿವೇಕಾನಂದ' ಮತ್ತು 'ಶ್ರೀರಾಮಕೃಷ್ಣ ಪರಮಹಂಸ' ಕೃತಿಗಳು ಆಶ್ರಮದಿಂದಲೇ ಅಚ್ಚಾಗುವಾಗ ಪುಸ್ತಕಗಳ ಪ್ರೂಫ್ ತಂದೆಯವರು ನೋಡುತ್ತಿದ್ದರು. ಆಗೆಲ್ಲಾ ತಂದೆಯವರು ಪ್ರೂಫ್‌ಅನ್ನು ಸ್ವಾಮೀಜಿಯವರಿಗೆ ತಲುಪಿಸಲು ನಮಗೆ ಕೊಡುತ್ತಿದ್ದರು. ನಾವು ಆಶ್ರಮಕ್ಕೆ ಹೋಗಿ ಸ್ವಾಮೀಜಿ ಅವರಿಗೆ ಅದನ್ನು ತಲುಪಿಸಿ ಅವರು ಕೊಟ್ಟ ಮತ್ತೊಂದು ಭಾಗವನ್ನು ಪ್ರೂಫ್‌ತಿದ್ದಲು ತಂದೆಯವರಿಗೆ ತಂದುಕೊಡುತ್ತಾ ನಮ್ಮ ಅಳಿಲು ಸೇವೆ ಮಾಡುತ್ತಿದ್ದೆವು. ಈಗ ಬೇಲೂರು ಮಠದಲ್ಲಿ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಪರಮಾಧ್ಯಕ್ಷರಾಗಿರುವ ಪೂಜ್ಯ ರಂಗನಾಥಾನಂದ ಸ್ವಾಮೀಜಿಯವರು ಮೈಸೂರಿಗೆ ಬಂದಾಗಲೆಲ್ಲಾ ಉದಯರವಿ



*ಧ್ಯಾನದಲ್ಲಿ ತಲ್ಲೀನರಾಗಿರುವ ಶ್ರೀ ಕುವೆಂಪು*

ಮನೆಗೆ ಬಂದು ತಂದೆಯವರೊಡನೆ ದೀರ್ಘ ಮಾತುಕತೆಯಾಡಿ ನಮ್ಮನ್ನೆಲ್ಲಾ ಮಾತಾಡಿಸಿ ಹೋಗುತ್ತಿದ್ದರು.

ಶ್ರೀರಾಮಕೃಷ್ಣರ ಸಾಹಿತ್ಯ ಕನ್ನಡದಲ್ಲಿ ಹೆಚ್ಚು ಬಂದಿಲ್ಲದ ಕಾಲದಲ್ಲಿ ತಂದೆಯವರು ಇಂಗ್ಲಿಷ್‌ನಲ್ಲಿ ಬರುತ್ತಿದ್ದ ವಿಚಾರಗಳನ್ನು ಓದಿ ಸಮಯವಿದ್ದಾಗ ಅಮ್ಮನಿಗೆ ಕನ್ನಡದಲ್ಲಿ ಹೇಳುತ್ತಿದ್ದರು. ಸ್ವಾಮಿ ಸೋಮನಾಥಾನಂದಜಿ ಪುಸ್ತಕಗಳನ್ನು ಕನ್ನಡದಲ್ಲಿ ಬರೆಯಲು ಪ್ರಾರಂಭಿಸಿದಾಗ ಅಮ್ಮನಿಗೆ ಬಹಳ ಸಂತೋಷ. "ನಮಗೆ ಮೊದಲು ಶ್ರೀರಾಮಕೃಷ್ಣ ವಿವೇಕಾನಂದರ ಬಗ್ಗೆ ತಿಳಿಯಲು ಕನ್ನಡದಲ್ಲಿ ಪುಸ್ತಕಗಳೇ ಇರಲಿಲ್ಲ; ಈಗ ಬೇಕಾದಷ್ಟು ಪುಸ್ತಕಗಳು ಬರುತ್ತಿವೆ" ಎಂದು ಅಮ್ಮ ಹೇಳುತ್ತಿದ್ದರು. ಹೊಸ ಪುಸ್ತಕ ಬಂದೊಡನೆ ಅವುಗಳನ್ನು ಓದುತ್ತಿದ್ದರು. ಕೆಲವು ಸಮಯ ಸಂಸಾರದಲ್ಲಿ ಎದುರಾಗುತ್ತಿದ್ದ ಮಾನಸಿಕ ಅಶಾಂತಿಗೆ, ಸಮಸ್ಯೆಗಳಿಗೆ, ಸ್ವಾಮಿ ಶಿವಾನಂದರ ಮಾತುಕತೆ 'ಗುರುವಿನೊಡನೆ ದೇವರಡಿಗೆ' ಪುಸ್ತಕದಿಂದ ಕೆಲವು ಅಧ್ಯಾಯಗಳನ್ನು ಆರಿಸಿ ದೇವರ ಮನೆಯಲ್ಲಿ ಓದುತ್ತಿದ್ದರು. ಅಮ್ಮ ಅದರಿಂದ ತುಂಬ ಶಾಂತಿ ಪಡೆಯುತ್ತಿದ್ದರು.

ತಂದೆಯವರು ಸರಿಯಾದದ್ದು ಎಂಬ ವಿಚಾರವನ್ನು ನಮಗೆ ತಿಳಿಸುತ್ತಿದ್ದರು. ಅದನ್ನು ಒಪ್ಪುವುದು ಬಿಡುವುದು ನಮಗೆ ಬಿಟ್ಟದ್ದು. ತಮ್ಮ ಅಭಿಪ್ರಾಯವನ್ನು ನಮ್ಮ ಮೇಲೆ ಬಲವಂತವಾಗಿ ಹೇರುತ್ತಿರಲಿಲ್ಲ.

ನಮ್ಮ ದೇವರಮನೆ ಎಲ್ಲಾ ದೇವರುಗಳ ಸಂಗಮವಾಗಿತ್ತು. ಶ್ರೀಗುರುಮಹಾರಾಜ್, ಶ್ರೀಮಾತೆ, ವಿವೇಕಾನಂದರೊಡನೆ, ಸ್ವಾಮಿ ಶಿವಾನಂದರು, ಕೃಷ್ಣ, ರಾಮ ಸೀತೆ, ಆಂಜನೇಯ, ಕಾಳಿ, ಗಣೇಶ, ಗೌರಿ, ಶಿವ, ವಿಷ್ಣು, ಲಕ್ಷ್ಮೀ, ವೆಂಕಟರಮಣ, ಅರವಿಂದ, ಬುದ್ಧ ಎಲ್ಲರೂ ಇದ್ದರು. ತಂದೆ

ಯವರು ತಮಾಷೆಯಾಗಿ "ನಮ್ಮ ದೇವರ ಮನೆಯಲ್ಲಿ ದೇವರ ಸಂತೆಯೇ ನೆರೆದಿದೆ, ಇನ್ನು ಅಲ್ಲಿ ಜಾಗವಿಲ್ಲ" ಎನ್ನುತ್ತಿದ್ದರು. ನಾವು ಚಿಕ್ಕವರಿರುವಾಗ ರಾಮಕೃಷ್ಣರು ಅವರ ಶಿಷ್ಯರಿಗೆ ಹೇಳಿದ ಮಾತನ್ನು ತಂದೆಯವರು ನಮಗೆ ಹೇಳುತ್ತಿದ್ದರು : "ಶ್ರೀರಾಮಕೃಷ್ಣರ ಶಿಷ್ಯರು ಸಾಧನೆ ತಪಸ್ಸಿಗಾಗಿ ತೀರ್ಥಕ್ಷೇತ್ರಗಳಿಗೆ ಹೋಗಿಬಂದಾಗ, ಶ್ರೀರಾಮಕೃಷ್ಣರು, 'ಎಲ್ಲೆಲ್ಲಿ ಅಲೆದರೇನು. ಎಲ್ಲಾ ಇಲ್ಲಿಯೇ (ತಮ್ಮ ಕಡೆಗೆ ಶ್ರೀರಾಮಕೃಷ್ಣರು ಕೈದೋರುತ್ತಾ) ಇರುವಾಗ' ಎಂದು ಹೇಳಿದ್ದಾರೆ. ಹಾಗೆಯೇ ಎಲ್ಲ ತೀರ್ಥಕ್ಷೇತ್ರಗಳೂ, ಎಲ್ಲ ದೇವಸ್ಥಾನಗಳೂ ಇಲ್ಲಿಯೇ ನಮ್ಮ ದೇವರ ಮನೆಯಲ್ಲಿಯೇ ಇವೆ. ಇದಕ್ಕಾಗಿ ಎಲ್ಲಿಯೂ ಹುಡುಕಿಕೊಂಡು ಹೋಗುವ ಪ್ರಮೇಯವಿಲ್ಲ. ಎಷ್ಟೊಂದು ಸಾಧುಗಳು ಸನ್ಯಾಸಿಗಳು ಇಲ್ಲಿ ಧ್ಯಾನಮಾಡಿದ್ದಾರೆ" ಎಂದು ಹೇಳಿ 'ದೇವರ ಮನೆಯಲ್ಲಿ' ಎಂಬ ಅವರ ಪದ್ಯ "ಇಲ್ಲೆ ಗಂಗಾತೀರ. ಇಲ್ಲೆ ಹಿಮಗಿರಿ ಪಾರ, ಇಲ್ಲಿಯೆ ಕಣಾ ಆ ಹರಿದ್ವಾರ!" ಎಂಬುದನ್ನು ಹೇಳುತ್ತಿದ್ದರು.

ತಂದೆಯವರನ್ನು ನೋಡಲು, ಅವರೊಡನೆ ಮಾತಾಡಲು ಅನೇಕರು ಬರುತ್ತಿದ್ದರು. ಕೆಲವು ಸಾರಿ ಮಾನಸಿಕ ಅಸ್ವಸ್ಥರು ಬಂದಾಗ ತಂದೆಯವರಿಗೆ ಅವರ ಸಮಸ್ಯೆ ಪರಿಹರಿಸಿ ಕಳುಹಿಸಲು ಕಷ್ಟವಾಗುತ್ತಿತ್ತು. ಅಂತಹ ಸಂದರ್ಭದಲ್ಲೂ ತಂದೆಯವರು ಶ್ರೀರಾಮಕೃಷ್ಣರ ಸಹಾಯವನ್ನೇ ಒದಗಿಸಿಕೊಳ್ಳುತ್ತಿದ್ದರು. ಒಂದು ಸಂದರ್ಭದಲ್ಲಿ ಮನಸ್ಸು ಸ್ವಸ್ಥವಿಲ್ಲದ ಯುವಕನೊಬ್ಬ ತಂದೆಯವರ ಬಳಿಗೆ ಬಂದು ನಾನಾ ರೀತಿಯ ಸಮಸ್ಯೆಗಳನ್ನು ಹೇಳಿದನು. ಕೊನೆಗೆ, "ನಾನು ಯಾವ ಅವಸ್ಥೆಯಲ್ಲಿದ್ದೇನೆ ಎಂದರೆ ನೀವು ವಿಷ ಕೊಟ್ಟರೂ ಬಾದಾಮಿ ಹಾಲೆಂದು ಕುಡಿವೆ" ಇತ್ಯಾದಿ ಮಾತಾಡಿ "ನನ್ನ ಎಲ್ಲಾ ಪ್ರಶ್ನೆಗಳಿಗೂ ನೀವೇ ಉತ್ತರ ಹೇಳಬೇಕು" ಎಂದು ಆಗ್ರಹಿಸಿದನು. ಅವನ ಮಾತನ್ನೆಲ್ಲಾ ಕೇಳಿ "ನೋಡಿ ನಿಮ್ಮ ಮನಸ್ಸನ್ನು ಹಿಡಿತವಿಲ್ಲದೆ ಹೀಗೆಲ್ಲಾ ಹರಿಯಬಿಡಬೇಡಿ. ಓದಿರುವೆ ಎಂದು ಹೇಳುವಿರಿ ; ಪಠ್ಯವಲ್ಲದೆ ಬೇರೆ ಬೇರೆ ಪುಸ್ತಕಗಳನ್ನು ಓದಿರುವಿರಾ? ಶ್ರೀರಾಮಕೃಷ್ಣ ವಿವೇಕಾನಂದ ಸಾಹಿತ್ಯವೇನಾದರೂ ಓದಿರುವಿರಾ? ಅವುಗಳನ್ನೆಲ್ಲಾ ಓದಿದರೆ ನಿಮ್ಮ ಪ್ರಶ್ನೆಗಳಿಗೆ ಉತ್ತರ ಸಿಗುತ್ತದೆ. ಇಲ್ಲೇ ಹತ್ತಿರದಲ್ಲಿ ರಾಮಕೃಷ್ಣ ಆಶ್ರಮ ಇದೆ. ಅನೇಕ ಜನ ಸಾಧುಗಳು, ಸನ್ಯಾಸಿಗಳು ಅಲ್ಲಿ ಇದ್ದಾರೆ. ಅವರು ನಿಮಗೆ ಮಾರ್ಗದರ್ಶನ ಮಾಡುವರು. ಸ್ವಾಮಿ ಸೋಮನಾಥಾನಂದಜಿ ಅವರು, ಅಧ್ಯಕ್ಷರೂ ಹಿರಿಯರೂ ಇದ್ದಾರೆ. ನನ್ನ ಹೆಸರು ಹೇಳಿ ನಾನೇ ಕಳುಹಿಸಿದ್ದು ಎಂದು ಹೇಳಿ ಅವರೊಡನೆ ಮಾತಾಡಿ, ನಿಮ್ಮ ಮನಸ್ಸು ಸಮಾಧಾನವಾಗುತ್ತದೆ" ಎಂದು ಹೇಳಿ ಕಳುಹಿಸಿದರು. ಆ ಯುವಕ ಹೋದಮೇಲೆ "ಪಾಪ ಏನಾಗಿದೆಯೋ ಏನೋ, ಅಸಂಬದ್ಧ ಮಾತಾಡುವನು" ಎಂದು ಕನಿಕರಿಸಿದರು.

ತಂದೆಯವರು 'ನೆನಪಿನ ದೋಣಿ' ಬರೆದಮೇಲೆ ಬೇರೆ ಯಾವ ಬರವಣಿಗೆಯನ್ನೂ ಮಾಡಲಿಲ್ಲ. ಮನೆಗೆ ಬಂದವರಿಗೆಲ್ಲಾ 'ವಿಶ್ವಮಾನವ ಸಂದೇಶ'ವನ್ನು ಕುರಿತು ಹೇಳುತ್ತಿದ್ದರು. ಮನೆಗೆ ಪಾದ್ರಿಯೊಬ್ಬರು ಮತಪ್ರಚಾರಕ್ಕೆ ಬಂದಾಗ ಅವರಿಗೆ ತಂದೆಯವರು ದೀರ್ಘವಾಗಿ ಭಾಷಣ ಮಾಡಿ "ವಿಶ್ವಮಾನವ ಸಂದೇಶವೆಂದರೇನು? ಏಕೆ ನಮಗೆ ಅಗತ್ಯ" ಮುಂತಾಗಿ ವಿವರಿಸಿದರು. **"ನಮಗೆ ಈಗ ಬೇಕಾಗಿರುವುದು ಮನುಜಮತ, ವಿಶ್ವಪಥ. ಆ ಮತ ಈ ಮತವಲ್ಲ, ಮಾನವನ ಎಲ್ಲ ಸಂಕುಚಿತ ಭಾವನೆಯನ್ನು ಹೋಗಲಾಡಿಸಲು ಬಂದವರು ಶ್ರೀರಾಮಕೃಷ್ಣರು. ನಾನು ಹೇಳುತ್ತಿರುವ ವಿಶ್ವಮಾನವ ಸಂದೇಶದ ಭಾವನೆಗಳು ಮೊದಲು ಸುಪ್ರಕಟಿತವಾದದ್ದು ಶ್ರೀರಾಮಕೃಷ್ಣ ಮತ್ತು ವಿವೇಕಾನಂದರಿಂದ"** ಎಂದು ಹೇಳಿ ಅಚ್ಚಾದ ವಿಶ್ವಮಾನವ ಸಂದೇಶಪತ್ರಿಕೆಯನ್ನು ಪಾದ್ರಿಯವರಿಗೆ ಕೊಟ್ಟು ಬೀಳ್ಕೊಟ್ಟರು. 'ಶ್ರೀರಾಮಕೃಷ್ಣ ವಚನವೇದ' ಪುಸ್ತಕದ ಮುನ್ನುಡಿಯಲ್ಲಿ ಅವರು ಬರೆಯುತ್ತಾರೆ "ಸರ್ವಧರ್ಮ ಸಮನ್ವಯ ದೃಷ್ಟಿಯನ್ನು ಈ ಯುಗದಲ್ಲಿ ಬಹುಪೂರ್ವದಲ್ಲಿಯೇ ಸ್ಪಷ್ಟವಾಗಿ ಅನುಭವಪೂರ್ವಕವಾಗಿ ಸರ್ವಜನಸುಲಭಗ್ರಾಹ್ಯವಾಗಿ ಪ್ರಭಾವಯುತವಾಗಿ, ಲೋಕಸಮಸ್ತಕ್ಕೂ ತೋರಿಸಿದವರು ಭಗವಾನ್ ಶ್ರೀರಾಮಕೃಷ್ಣ ಪರಮಹಂಸರು. ಈ 'ವಚನವೇದ' ನಿಜವಾಗಿಯೂ ಸಮನ್ವಯ ದೃಷ್ಟಿಯನ್ನು ಸರ್ವಪ್ರಜೆಗಳಿಗೂ ಸುಲಭವಾಗಿ ಹೃದಯಸ್ಪರ್ಶಿಯಾಗುವಂತೆ ಬೋಧಿಸುವ ನವೀನ ವೇದ" ಎಂದು. ಈ ವಾಕ್ಯಗಳನ್ನು ಓದುತ್ತಿರುವಂತೆಯೇ ಕುವೆಂಪು ಅವರ ವಿಶ್ವಮಾನವ ಸಂದೇಶದ ಹಿಂದಿನ ಸ್ಫೂರ್ತಿ, ಶ್ರೀರಾಮಕೃಷ್ಣರೆಂಬುದು ಸುಸ್ಪಷ್ಟವಾಗುತ್ತದೆ. ಕುವೆಂಪು ಜೀವನದ ಕೊನೆಯ ತೆನೆಯೆ 'ವಿಶ್ವಮಾನವ ಸಂದೇಶ' (ಅವರು ಉದಯರವಿ ಪ್ರಕಾಶನದಿಂದ ಪ್ರಕಟಿಸಿದ ಕೊನೆಯ ಪುಸ್ತಕದ ಹೆಸರು 'ಕೊನೆಯ ತೆನೆ ಮತ್ತು ವಿಶ್ವಮಾನವ ಸಂದೇಶ'). ಇದು ಶ್ರೀರಾಮಕೃಷ್ಣರ ಸರ್ವಧರ್ಮ ಸಮನ್ವಯ ತತ್ತ್ವದ ಸಾರಸಂಗ್ರಹ ಎಂದರೆ ಉತ್ಪ್ರೇಕ್ಷೆಯಲ್ಲ. ಎಲ್ಲ ಚೇತನಗಳೂ ಉದ್ಬೋಧನಗೊಳ್ಳಲಿ, ವಿಶ್ವಮಾನವರಾಗಲಿ ಎಂಬ ಹಾರೈಕೆಯೆ ಅವರ ನಿಜಜೀವನದ ಮಂತ್ರವಾಗಿತ್ತು. "ನನ್ನ ಎಲ್ಲ ಬರವಣಿಗೆಯನ್ನು ಮರೆತರೂ ತೊಂದರೆ ಇಲ್ಲ; ನನ್ನ ವಿಶ್ವಮಾನವ ಸಂದೇಶವನ್ನು ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಿ; ಇತರರಿಗೂ ಸಂದೇಶವನ್ನು ಹಂಚಿ" ಎಂಬುದು ಅವರ ಹಾರೈಕೆಯಾಗಿತ್ತು. ಅವರೇ ಬರೆದಿರುವಂತೆ "ಹಾರೈಸು ಹಾರೈಸು ಹಾರೈಸು, ಜೀವ: ಹಾರೈಸು ನೀನಾಗುವನ್ನೆಗಂ ದೇವ!" ಎಂಬ ಈ ದಿವ್ಯ ಹಾರೈಕೆಯೇ ಇಂದಿಗೂ ನಮ್ಮೆಲ್ಲರಿಗೂ ಆದರ್ಶವಾಗಿದೆ. ✡

**ಪ್ರಾಯೋಜಕರು** : M/s ವಿಶ್ವಾಸ್, # 1, ಜೆ.ಎನ್. ಮರಡಿ ಮಾರ್ಕೆಟ್
ಸಿ.ಟಿ. ಬೆಂಗಳೂರು -560 002